<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>
ಸಿ.ಸಿ. ನಂ. 20925-2024

ಸಿಡಬ್ಲ್ಯೂ - 2ಪಿಡಬ್ಲ್ಯೂ-2

| | | |
|---|---|---|
| ಸಾಕ್ಷಿದಾರರ ಹೆಸರು | : | ರಿಜ್ವನ್ ಅಹಮ್ಮದ್ |
| ತಂದೆಯ ಹೆಸರು | : | ನಾಜೀಫ್ ಅಹಮ್ಮದ್ |
| ವಯಸ್ಸು | : | 32 ವರ್ಷ |
| ಕೆಲಸ | : | ಖಾಸಗಿ ಕೆಲಸ |
| ವಾಸ | : | ತಾವರೆಕೆರೆ, ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 20-12-2025  ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ಆರೋಪಿ ಗೊತ್ತು. ನಾನು 2017 ರಿಂದ 2018 ರವರೆಗೆ ಏರಟೇಲ್ ಮೊಬೈಲ್ ಕಂಪನಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ಆರೋಪಿಯು ನನಗೆ ಸ್ನೇಹಿತರಾಗಿ ಜೊತೆಯಲ್ಲಿ ಕೆಲಸ ಮಾಡುತ್ತಿದ್ದೇವು.

ನಾನು ಕೆಲಸ ಬಿಟ್ಟೇ ನಂತರ ಆರೋಪಿಯು ನನಗೆ ಕರೆ ಮಾಡಿ ತನಗೆ ಏರಟೆಲ್ ಸೀಮ್ ಬೇಕಾಗಿದೆ ಎಂದು ಹೇಳಿದ್ದರು, ನಾನು ಸೀಮ್ ಕೊಟ್ಟೆ ಸಂಖ್ಯೆ ನೆನಪಿಲ್ಲ ಎಂದು ಹೇಳುತ್ತಾರೆ. ನಂತರ ಚಾಸಾ 5 ರವರು ನನಗೆ ಕರೆ ಮಾಡಿ ನಾನು ಎರಟೇಲ್ ಸೀಮ್ ನ್ನು ಉಪಯೋಗಿಸುವ ಬಗ್ಗೆ ಕೇಳಿರುತ್ತಾರೆ. ಆ ಸಮಯದಲ್ಲಿ ನಾನು ಸೀಮ್ ನ್ನು ಬಳಕೆ ಮಾಡುತ್ತಿಲ್ಲವಾದ ಕಾರಣ ಆ ವಿಚಾರವನ್ನು ಅವರಿಗೆ ತಿಳಿಸಿರುತ್ತೇನೆ. ನಂತರ ಸಿಐಡಿ ರವರು ನನಗೆ ಕರೆ ಮಾಡಿ ಮೇಲೆ ಹೇಳಿದ ನಾನು ಮಾರಾಟ ಮಾಡಿದ ಸೀಮ್ ನ್ನು ಯಾರೋ ದುರುಪಯೋಗ ಪಡಿಸಿಕೊಳ್ಳುತ್ತಿರುವ ಬಗ್ಗೆ ನನಗೆ ತಿಳಿಸಿರುತ್ತಾರೆ.

ಸದರಿ ಸಂಖ್ಯೆಯಿಂದ ನಂಬರ್ ಗಳನ್ನು ಆಕ್ಟಿವೆಟ್ ಮಾಡುತ್ತಿರುವ ಬಗ್ಗೆ ಸಿಐಡಿ ಪೊಲೀಸರು ನನಗೆ ತಿಳಿಸಿರುತ್ತಾರೆ. ಈ ವಿಚಾರದ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ. ಈ ವಿಚಾರದಲ್ಲಿ ನಾನು ನ್ಯಾಯಾಲಯದಲ್ಲಿ ಒಂದು ಬಾರಿ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ಸಿಆರ್ ಪಿ ಕಲಂ. 64 ರ ಅಡಿಯಲ್ಲಿ ದಾಖಲಾದ ತನ್ನ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.  2 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿತರ ಪರ ವಕೀಲರು ಪಾಟೀ ಸವಾಲನ್ನು ಮಾಡಲು ಸಮಯಾವಕಾಶವನ್ನು ಕೋರಿದ್ದು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ